**ಮಿಸಲೇನಿಯಸ್ ಅರ್ಜಿ . ಸಂಖ್ಯೆ : 17/2017**
**ಪಿ..ಡಬ್ಲ್ಯೂ -01**

**ದಿನಾಂಕಃ 29-10-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಪಾಟೀಸವಾಲು :- ಎದುರುದಾರರ ಪರ ಶ್ರೀ. ಎನ್ ಕೆ. ವಕೀಲರಿಂದ :-**

ನಿಪಿ-4 ಅನ್ನು ಯಾವ ಉದ್ದೇಶಕ್ಕಾಗಿ ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೀರಿ ಎಂದರೆ ಸಾಕ್ಷಿ ಅದು ನಮ್ಮ ತಾತನವರ ಸ್ವತ್ತು ಆ ಕಾರಣಕ್ಕಾಗಿ ಎಂದು ನುಡಿಯುತ್ತಾರೆ. ನಿಪಿ-4ರಲ್ಲಿ ಸದರಿ ಅಸಲು ದಾವೆ ನಂ.32/2011ರ ವಾದಪತ್ರ ಮತ್ತು ಮಧ್ಯಂತರ ಅರ್ಜಿಗಳನ್ನು ಹಾಜರು ಪಡಿಸಿರುವುದಿಲ್ಲ ಎಂದರೆ ಸಾಕ್ಷಿ ಎಲ್ಲಾ ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ಅಸಲು ದಾವೆ ನಂ.32/2011ರ ವಾದಪತ್ರ ಮತ್ತು ಮಧ್ಯಂತರ ಅರ್ಜಿಗಳನ್ನು ನ್ಯಾಯಾಲಯಕ್ಕೆ ನೀವು ಹಾಜರು ಪಡಿಸಿರುವುದಿಲ್ಲ ಎಂದರೆ ಸಾಕ್ಷಿ ಹಾಜರು ಪಡಿಸಿರುವುದಿಲ್ಲ ಎಂದು ನುಡಿಯುತ್ತಾರೆ. ನಿಪಿ-4ರ ಆದೇಶದಲ್ಲಿ ಮರ ಕಡಿಯಬಾರದು ಎಂದು ಆದೇಶ ಇರುವುದಿಲ್ಲ ಎಂದರೆ ಸಾಕ್ಷಿ ಇರುತ್ತದೆ ಎಂದು ನುಡಿಯತ್ತಾರೆ. ಸದರಿ ನಿಪಿ-4ರ ಆದೇಶದಲ್ಲಿ ಜಮೀನುಗಳನ್ನು ಮಾರಾಟ ಮಾಡಬಾರದು ಎಂದು ಮಾತ್ರ ಆದೇಶ ಇರುತ್ತದೆ ಎಂದರೆ ಸಾಕ್ಷಿ ಮಾರಾಟ ಮಾಡಬಾರದು ಮತ್ತು ಮರಗಳನ್ನು ಕಡಿಯಬಾರದು ಎಂದು ಎಲ್ಲಾ ಆದೇಶ ಇರುತ್ತದೆ ಎಂದು ನುಡಿಯುತ್ತಾರೆ. ಮರಗಳನ್ನು ಕಡಿಯಬಾರದು ಎಂಬ ಆದೇಶ ಇರುವ ಆದೇಶದ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸುತ್ತೀರಾ ಎಂದರೆ ಸಾಕ್ಷಿ ಹಾಜರು ಪಡಿಸುತ್ತೇನೆ ಎಂದು ನುಡಿಯುತ್ತಾರೆ. ನಿಮ್ಮ ವಾದಪತ್ರದಲ್ಲಿ ಹುಣಸೆ ಮರ ಇದ್ದ ಬಗ್ಗೆ ನಮೂದು ಮಾಡಿರುತ್ತೀರಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ನಿಮ್ಮ ವಾದಪತ್ರದಲ್ಲಿ ಹುಣಸೆ ಮರ ಇರುವುದರ ಬಗ್ಗೆ ನಮೂದು ಮಾಡಿದ ವಾದಪತ್ರವನ್ನು ನ್ಯಾಯಾಲಯಕ್ಕೆ ಹಾಜರು ಪಡಿಸುತ್ತೀರಾ ಎಂದರೆ ಸಾಕ್ಷಿ ಎಲ್ಲಾ ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ಯಾವ ಉದ್ದೇಶಕ್ಕಾಗಿ ನಿಪಿ-6 ಅನ್ನು ಹಾಜರು ಪಡಿಸಿರುತ್ತೀರಿ ಎಂದರೆ ಸಾಕ್ಷಿ ಹೋಗಲು ಮತ್ತು ಬರಲು ತೊಂದರೆ ಕೊಡಬಾರದು ಎಂದು ನುಡಿಯುತ್ತಾರೆ. ಸದರಿ ನಿಪಿ-6 ರಲ್ಲಿ ವೆಂಕಟಾಚಲಯ್ಯ ರವರು ಗಲಾಟೆ ಮಾಡಿ ತೊಂದರೆ ಕೊಡುತ್ತಿದ್ದಾರೆ ಎಂದು ಮಾತ್ರ ನಮೂದು ಇದೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸದರಿ ನಿಪಿ-6ರ ನಂತರ ಮರ ಕಡಿಯುತ್ತಿದ್ದಾರೆ ಎಂದು ಇನ್ನೊಂದು ದೂರು ಕೊಟ್ಟಿರುತ್ತೀರಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸದರಿ ದೂರಿನ

ಅನ್ವಯ ಪೋಲಿಸರು ಏನು ಕ್ರಮ ಕೈಗೊಂಡಿರುತ್ತಾರೆ ಎಂಬುದರ ಬಗ್ಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೀರಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಮರ ಕಡಿಯುವುದರ ಬಗ್ಗೆ ಹಾಗೂ ಗಲಾಟೆ ಮಾಡಿದ ಬಗ್ಗೆ ಒಂದೇ ದಿನ ದೂರನ್ನು ಕೊಟ್ಟಿದ್ದ ಎಂದರೆ ಸಾಕ್ಷಿ ಹೌದು ಎಂದು ನುಡಿಯತ್ತಾರೆ. ಮರ ಕಡಿದ ಸಂಬಂಧ ದೂರಿನ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ ಎಂದರೆ ಸಾಕ್ಷಿ ಎಲ್ಲಾ ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ಪೋಲಿಸರು ನೀಡಿದ ಸ್ವೀಕೃತಿಯನುನ ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ ಎಂದರೆ ಸಾಕ್ಷಿ ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ಎದುರುದಾರರು ಯಾವುದೇ ಮರವನ್ನು ಕಡಿಯದೆ ಇದ್ದರೂ ದಾಖಲೆಗಳನ್ನು ಸೃಷ್ಟಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ.

**ಮರು ವಿಚಾರಣೆ ಇರುವುದಿಲ್ಲ.**

ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,

ಪ್ರ. ನ್ಯಾ. ದಂ. ಮತ್ತು ಜೆ. ಎಂ. ಎಫ್. ಸಿ.
ಮಾಗಡಿ.